# ಅಸಾಂಜೆ ಪ್ರೇಮ ಪ್ರಕರಣ

'ಸುದ್ದಿ ಜಗತ್ತಿನ ಸೂಪರ್‌ಸ್ಟಾರ್' ಜೂಲಿಯನ್ ಅಸಾಂಜೆಯ ಕುರಿತು ಹೊಸ ಸುದ್ದಿಗಳು ಸ್ಫೋಟಗೊಳ್ಳುತ್ತಲೇ ಇವೆ. ಸದ್ಯಕ್ಕೆ ಇಂಗ್ಲೆಂಡಿನ ಈಕ್ವೆಡಾರ್ ರಾಯಭಾರಿ ಕಚೇರಿಯಲ್ಲಿ ಆಶ್ರಯ ಪಡೆದು ವಾಸಿಸುತ್ತಿರುವ ಜೂಲಿಯನ್ ಅಸಾಂಜೆ, ಅಲ್ಲಿಂದಲೇ ತನ್ನ ವಿಕಿಲೀಕ್ಸ್ ಸಾಹಸಗಳನ್ನು ಮುಂದುವರಿಸಿದ್ದಾನೆ. ಇತ್ತೀಚೆಗೆ ಈಕ್ವೆಡಾರ್ ರಾಯಭಾರ ಕಚೇರಿಗೆ ಭೇಟಿ ನೀಡಿದ "ಬೇವಾಚ್" ಸುಂದರಿ ಪಮೇಲಾ ಆಂಡರ್‌ಸನ್, "ಆತ ನಿಜಕ್ಕೂ ಸುಂದರಾಂಗ. ಮದುವೆ ಆಗಲೂ ಅರ್ಹ" ಎಂದಿರುವುದು ಟ್ಯಾಬ್ಲಾಯ್ಡ್ ಪತ್ರಿಕೆಗಳಿಗೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಅಸಾಂಜೆ ಕೂಡಾ ಪಮೇಲಾ ಬಗ್ಗೆ ಉತ್ಸಾಹದ ಮಾತುಗಳನ್ನೇ ಆಡಿದ್ದು, ಅದರ ಬೆನ್ನಲ್ಲೇ ಇಬ್ಬರ ನಡುವೆ ಪ್ರೇಮಾಂಕುರವಾಗಿದೆ ಎಂದು ಸುದ್ದಿ ಹಬ್ಬಿತು. ಒಂದು ಮದುವೆಯಾಗಿ ಒಬ್ಬ ಮಗನನ್ನು ಹೊಂದಿರುವ 43ರ ಹರೆಯದ ಅಸಾಂಜೆ ಹಾಗೂ ಮೂರು ಮದುವೆಯಾಗಿ ನಾಲ್ಕು ಮಕ್ಕಳನ್ನು ಹೊಂದಿರುವ ಪಮೇಲಾ ಶೀಘ್ರವೇ ಮದುವೆ ಆಗಲಿದ್ದಾರೆ ಎಂದೂ ಗುಲ್ಲೆದ್ದಿತು. ಆದರೆ ಅದನ್ನು ಅಸಾಂಜೆ ಅಲ್ಲಗಳೆದಿದ್ದಾನೆ.

ಕಂಪ್ಯೂಟರ್ ಹ್ಯಾಕರ್ ಆಗಿರುವ ಅಸಾಂಜೆ, ವಿಕಿಲೀಕ್ಸ್ ಸೈಟ್ ಆರಂಭಿಸಿದ್ದು 2006ರಲ್ಲಿ. ಆರಂಭದಲ್ಲಿ ಆತ ದೇಶ ವಿದೇಶಗಳ ಸುದ್ದಿಗಳನ್ನು ಲೀಕ್ ಮಾಡಿದ್ದರೂ ಅದು ಅಷ್ಟು ದೊಡ್ಡ ಸುದ್ದಿ ಆಗಿರಲಿಲ್ಲ. ಆದರೆ ಅಫ್ಘಾನಿಸ್ತಾನದಲ್ಲಿ ನಿರಾಯುಧ ನಾಗರಿಕರ ಮೇಲೆ ಅಮೆರಿಕನ್ ಹೆಲಿಕಾಪ್ಟರ್‌ಗಳು ಬಾಂಬ್ ದಾಳಿ ನಡೆಸಿದ ವೀಡಿಯೊಗಳನ್ನು ಯಾವತ್ತು ಅಸಾಂಜೆ ಲೀಕ್ ಮಾಡಿದನೋ, ಅಂದಿನಿಂದಲೇ ಕೀರ್ತಿ–ಶನಿ ಆತನ ಬೆನ್ನುಹತ್ತಿದೆ. ಆ ಬಳಿಕ ಆತ ಜಗತ್ತಿನ ಹಲವು ದೇಶಗಳಲ್ಲಿ ನಾಗರಿಕರ ಮೇಲೆ ನಡೆಯುವ ದೌರ್ಜನ್ಯಗಳ ವೀಡಿಯೊಗಳನ್ನು ಬಿಡುಗಡೆ ಮಾಡುತ್ತಲೇ ಹೋದ. ಬಹುತೇಕ ಎಲ್ಲ ವೀಡಿಯೋಗಳೂ ಆಯಾ ದೇಶದ ಮಿಲಿಟರಿಯ ವರ್ಗೀಕೃತ ಮಾಹಿತಿಗಳೇ. ಅಸಾಂಜೆ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದಂತೆಯೇ ಸಾವಿರಾರು ಶತ್ರುಗಳೂ ತಯಾರಾದರು.

2010ರ ಆಗಸ್ಟ್‌ನಲ್ಲಿ ಅಸಾಂಜೆ ಸ್ವೀಡನ್‌ನಲ್ಲಿದ್ದ. ಅಲ್ಲಿ ಹೋಟೆಲ್‌ನಲ್ಲಿ ಇಬ್ಬರು ಮಹಿಳೆಯರು ಭೇಟಿಯಾದರು, ಇಬ್ಬರ ಜತೆಗೂ ಅಸಾಂಜೆ "ಕೂಡಿ"ಯಾಡಿದ. ಆ ಇಬ್ಬರು ಮರುದಿನ ನೇರ ಪೊಲೀಸ್ ಠಾಣೆಗೆ ಹೋಗಿ ಅಸಾಂಜೆ ವಿರುದ್ಧ ಅತ್ಯಾಚಾರದ ದೂರು ನೀಡಿದರು. ಪೊಲೀಸರು ಅಸಾಂಜೆಯನ್ನು ಬಂಧಿಸಿ, ಪ್ರಶ್ನಿಸಿ, ಬಿಡುಗಡೆ ಮಾಡಿದರು. ಅದಾಗಿ ಮೂರು ತಿಂಗಳಲ್ಲಿ ಇಂಟರ್‌ಪೋಲ್ ಅಸಾಂಜೆಯ ಹಾಜರಿಗೆ ನೋಟಿಸ್ ಜಾರಿಗೊಳಿಸಿತು. ಅಸಾಂಜೆ ನೇರ ನ್ಯಾಯಾಲಯಕ್ಕೆ ಹಾಜರಾದ. ಅದಾಗಲೇ ಆತ ಸೂಪರ್‌ಸ್ಟಾರ್ ಆಗಿದ್ದ. ಆತನ ಬೆಂಬಲಿಗರು 2.40 ಲಕ್ಷ ಪೌಂಡ್ ಹಣ ನೀಡಿ ಆತನ ಜಾಮೀನು ಬಿಡುಗಡೆಗೆ ನೆರವಾದರು. ಕಾನೂನು ಸಮರ ಮುಂದುವರಿದಿದೆ.



ಈ ಮಧ್ಯೆ ಅಸಾಂಜೆಯನ್ನು ಸ್ವೀಡನ್ನಿಗೆ ಗಡೀಪಾರು ಮಾಡಬೇಕೆಂದು ಅಲ್ಲಿನ ಸರಕಾರ ಬ್ರಿಟನ್ನಿಗೆ ಅಹವಾಲು ಸಲ್ಲಿಸಿತು. ಆದರೆ ಅಸಾಂಜೆ ಅಲ್ಲಿಗೆ ಹೋಗಲು ಒಪ್ಪಲಿಲ್ಲ. ಸ್ವೀಡನ್ ಸರಕಾರ ತನ್ನನ್ನು ಬಂಧಿಸಿ ಅಮೆರಿಕದ ಸಿಐಎ ಗೆ ಒಪ್ಪಿಸಬಹುದು, ಅಮೆರಿಕ ರಾಷ್ಟ್ರದ್ರೋಹದ ಕೇಸ್ ಹಾಕಬಹುದು ಎಂದು ಅಸಾಂಜೆ ಭಯ. ಲಂಡನ್ನಿನಲ್ಲಿ ಈಕ್ವೆಡಾರ್ ರಾಯಭಾರ ಕಚೇರಿಗೆ ಹೋದ ಅಸಾಂಜೆ, ಈಕ್ವೆಡಾರ್ ಸರಕಾರಕ್ಕೆ ರಾಜಕೀಯ ಆಶ್ರಯದ ಅರ್ಜಿ ಸಲ್ಲಿಸಿದ, ಅಲ್ಲಿನ ಸೋಶ್ಯಲಿಸ್ಟ್ ಸರಕಾರ ಅಸಾಂಜೆಗೆ ಆಶ್ರಯ ನೀಡಿತು. 2012ರಿಂದ ಅಸಾಂಜೆ ಈಕ್ವೆಡಾರ್ ರಾಯಭಾರ ಕಚೇರಿಯಲ್ಲೇ ವಾಸ ಹೂಡಿದ್ದಾನೆ. ಹೊರಗೆ ಕಾಲಿಟ್ಟರೆ ಬಂಧಿಸಲು ಸ್ವೀಡನ್ ಪೊಲೀಸರು ರೆಡಿ ಆಗಿದ್ದಾರೆ. ಅಸಾಂಜೆ ಅಲ್ಲಿಂದಲೇ ಪತ್ರಿಕಾಗೋಷ್ಠಿ. ವೀಡಿಯೊ ಕಾನ್ಫರೆನ್ಸ್, ವೀಡಿಯೊ ಲೀಕ್ ಎಲ್ಲವನ್ನೂ ನಡೆಸುತ್ತಿದ್ದಾನೆ! ಸೂಪರ್‌ಸ್ಟಾರ್‌ಗಳಾದ ಲೇಡಿ ಗಾಗಾ, ಯೋಕೊ ಒನೊ, ಪಮೇಲಾ ಮುಂತಾದವರು ಅಲ್ಲಿಗೇ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಇದೀಗ ಈಕ್ವೆಡಾರ್‌ನಲ್ಲಿ ಅಧ್ಯಕ್ಷ ಚುನಾವಣೆ ಘೋಷಣೆಯಾಗಿದೆ. ಸೋಶಲಿಸ್ಟ್ ಪಕ್ಷಕ್ಕೆ ಪ್ರತಿಪಕ್ಷ ಕನ್ಸರ್ವೇಟಿವ್‌ನ ಅಭ್ಯರ್ಥಿ ಗುಲ್ಲೆರ್ಮೊ ಲಾಸೊ ತೀವ್ರ ಪ್ರತಿಸ್ಪರ್ಧೆ ನೀಡಿದ್ದಾನೆ. ಮೊದಲ ಸುತ್ತಿನ ಪ್ರಚಾರದಲ್ಲಿ ಆಳುವ ಪಕ್ಷ ಅಲ್ಪ ಮುಂದಿದ್ದರೂ, ಫಲಿತಾಂಶ ಏನಾಗುತ್ತದೆಂದು ಹೇಳಲಾಗದು. "ನಾನು ಅಧಿಕಾರಕ್ಕೆ ಬಂದರೆ ಜೂಲಿಯನ್ ಅಸಾಂಜೆಯನ್ನು ಲಂಡನ್ನಿನ ಈಕ್ವೆಡಾರ್ ರಾಯಭಾರಿ ಕಚೇರಿಯಿಂದ ಹೊರಹಾಕುತ್ತೇನೆ" ಎಂದು ಲಾಸೊ ಈಗಾಗಲೆ ಘೋಷಣೆ ಮಾಡಿಯಾಗಿದೆ. ಅಸಾಂಜೆ ಬಹುತೇಕ ಮೇ ತಿಂಗಳ ಹೊತ್ತಿಗೆ ರಾಯಭಾರ ಕಚೇರಿಯಿಂದ ಹೊರಬೀಳಬಹುದು ಎಂದು ವಿಶ್ಲೇಷಕರು ಕಾಯುತ್ತಿದ್ದಾರೆ. ಅಂದರೆ ನಾಲ್ಕೂವರೆ ವರ್ಷಗಳ ಅಸಾಂಜೆ ಕಚೇರಿ–ಬಂಧನಕ್ಕೆ ಹೊಸ ತಿರುವು ಸಿಗಬಹುದು.

ಇಷ್ಟೆಲ್ಲ ಟೆನ್ಶನ್‌ಗಳ ನಡುವೆಯೇ ಅಸಾಂಜೆ– ಪಮೇಲಾ ಪ್ರೇಮಪ್ರಕರಣದ ಬಗ್ಗೆ ರೋಚಕ ಕಥೆಗಳು ಪ್ರಕಟವಾಗುತ್ತಿವೆ. ಅವರು ಹಿಂದೆ ಎಲ್ಲೆಲ್ಲ ಭೇಟಿಯಾಗಿದ್ದರು ಎಂಬ ಬಗ್ಗೆ ಟ್ಯಾಬ್ಲಾಯ್ಡ್ ಗಳು ಶೋಧ ನಡೆಸುತ್ತಿವೆ, ಅಸಾಂಜೆಯ ಸಾಹಸ ಕಥೆಯನ್ನು ಇಟ್ಟುಕೊಂಡೇ ಐವರು ನಿರ್ಮಾಪಕರು ಸಿನಿಮಾ ಮಾಡುವುದಾಗಿ ಘೋಷಿಸಿದ್ದಾರೆ. ಒಂದು ಡಾಕ್ಯುಮೆಂಟರಿ ಮತ್ತು ಸಿನಿಮಾ ಬಿಡುಗಡೆಯಾಗಿದೆ. "ದಿ ಫಿಫ್ತ್ ಎಸ್ಟೇಟ್" ಎಂಬ ಬಿಡುಗಡೆಯಾದ ಸಿನಿಮಾದ ಬಗ್ಗೆ ಅಸಾಂಜೆ ಕೆಂಡ ಕಾರಿದ್ದಾನೆ. ತೆಲುಗಿನಲ್ಲೂ ಇತ್ತೀಚೆಗೆ ಒಂದು ಸಿನಿಮಾ (ಇಸಂ) ತೆರೆ ಕಂಡಿದೆ. ಪಮೇಲಾ ಜತೆಗೆ ಮದುವೆಯಾದರೆ ಇನ್ನಷ್ಟು ಸಿನಿಮಾಗಳು ಬರಬಹುದು. ಆದರೆ ಅಮೆರಿಕದ ಸಿಐಎ ಮುಂದೇನು ಮಾಡಲಿದೆ ಎನ್ನುವುದು ಕುತೂಹಲದ ಸಂಗತಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65